ಶ್ರೀ ಎಸ್. ಬಂಗಾರಪ್ಪ.—ಅದನ್ನೇ ನೀತಿಯಾಗಿ ಸರ್ಕಾರ ಪರಿಗಣಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಉತ್ತರ ಕೊಡುವವರು ಯಾರು ? ಬಂಗಾರಪ್ಪನವರೇನು ಮಂತ್ರಿಗಳೇ ?

(ಗೊಂದಲ)

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಲ್ಲಿನ ದುರುಪಯೋಗವಾಗಿರುವ ಬಗ್ಗೆ ಮಾನ್ಯ ದೊಡ್ಡಮೇಟಿಯವರು ಕೇಳಿದ ಪ್ರಶ್ನೆಗೆ ಮಾನ್ಯ ಬಂಗಾರಪ್ಪನವರು ಏನು ಉತ್ತರವನ್ನು ಹೇಳಿದರು, ಈ ದುರುಪಯೋಗಗಳು ಯಾವ ಮಂತ್ರಿಮಂಡಲದಲ್ಲಿ ಮಾನ್ಯ ಬಂಗಾರಪ್ಪನವರು ಮಂತ್ರಿಗಳಾಗಿದ್ದರೋ ಆ ಮಂತ್ರಿಮಂಡಲದ ಕಾಲದಲ್ಲಿ ಆದಂತಹವು. ಆ ದುರುಪಯೋಗಗಳ ಬಗ್ಗೆ ನಾವು ತನಿಖೆ ಮಾಡುತ್ತಿದ್ದೇವೆ ಎಂದು ನಾನು ಹೇಳಿದ್ದು.

ಶ್ರೀ ಎಸ್. ಬಂಗಾರಪ್ಪ.—ಅದು ನಮ್ಮ ಕಾಲದಲ್ಲಿ ಆಗಿದ್ದಲ್ಲ. ನಿಮ್ಮ ಕಾಲದಲ್ಲಿ ಆಗಿದ್ದು. ನಿಮ್ಮ ಕಾಲದ ಪ್ರಶ್ನೆ ಅದು.

(ಗೊಂದಲ)

ಅಧ್ಯಕ್ಷರು.—ಈಗ ಮುಂದಿನ ಪ್ರಶ್ನೆ ೧೮೭

ಮೈಸೂರಿಂ ತೊಣಚಿ ಕೊಪ್ಪಲ್ ಜಯನಗರ ಬಡಾವಣೆಯಲ್ಲಿನ ಮನೆಗಳ ಹಂಚಿಕೆ ಬಗ್ಗೆ

೧೮೭. ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರಾಭಿವೃದ್ಧಿ ಸಮಿತಿಯ ಜಯನಗರ ತೊಣಚಿ ಕೊಪ್ಪಲಿನಲ್ಲಿ ೮೦೭ ಮನೆಗಳನ್ನು ಮಂಜೂರು ಮಾಡಿ ಎಷ್ಟು ವರ್ಷಗಳಾಯಿತು ?

ಆ) ಇದುವರೆಗೆ ಮಂಜೂರಾದವರಿಗೆ ಮನೆಗಳನ್ನು ಕೊಡದಿರಲು ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನ್ಯಾಯ ಸಂಸದೀಯ, ವ್ಯವಹಾರ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಸುಮಾರು ಒಂದೂವರೆ ವರ್ಷ.

ಆ) ಮನೆಗಳ ಕಟ್ಟಡದ ಕೆಲಸ ಪೂರ್ಣವಾಗಿದೆ. ಆದರೆ ನೀರು ಸರಬರಾಜು, ಒಳಚರಂಡಿ, ವಿದ್ಯುಚ್ಛಕ್ತಿ ಸರಬರಾಜು ಹಾಗೂ ಬೀದಿ ದೀಪ ಸೌಲಭ್ಯ ಕಲ್ಪಿಸುವ ಕೆಲಸವು ಪೂರ್ಣವಾಗಿಲ್ಲದಿರುವುದರಿಂದ ಮನೆಗಳನ್ನು ಮಂಜೂರಾದವರ ವಶಕ್ಕೆ ಕೊಡಲಾಗಿರುವುದಿಲ್ಲ.

ಶ್ರೀ ವೇದಾಂತ ಹೆಬ್ಬಿಗೆ.—ಅಧ್ಯಕ್ಷರೇ, ೧೮ ತಿಂಗಳುಗಳಾದರೂ ಇನ್ನೂ ಸೌಕರ್ಯಗಳನ್ನು ಕಲ್ಪಿಸಿಕೊಡದಿರುವುದಕ್ಕೆ ಕಾರಣವೇನು ? ಅಲ್ಲಿನ ಅನೇಕ ಮನೆಗಳ ಕಿಟಕಿ ಬಾಗಿಲುಗಳನ್ನು ಕಳ್ಳರು ಕಿತ್ತುಕೊಂಡು ಹೋಗಿದ್ದು ಅನೇಕ ಮನೆಗಳ ಗೋಡೆಗಳು ಬಿದ್ದುಹೋಗಿವೆ. ಇವನ್ನೆಲ್ಲಾ ಮಂಜೂರು ಮಾಡಿಸಿಕೊಂಡವರು ಸರಿಪಡಿಸಿಕೊಳ್ಳಬೇಕೇ ಅಥವಾ ಇಲಾಖೆಯವರು ರಿಪೇರಿ ಮಾಡಿಸಿಕೊಳ್ಳುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಅಲ್ಲಿ ಏನು ಕಿತ್ತು ಬಿದ್ದಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ ಅವುಗಳನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ಆ ಮನೆಗಳನ್ನು ಕೊಳ್ಳಲು ಹಣ ಕಟ್ಟಲು ಸಾಲ ಮಾಡಿ ಆ ಜನ ಇನ್ನೂ ಬಾಡಿಗೆ ಮನೆಯಲ್ಲಿದ್ದಾರೆ. ಅವರು ಬಾಡಿಗೆ ಮನೆಯಲ್ಲಿ ಇದ್ದರೂ ಆ ಮನೆಗಳಿಗೆ ನೀರು,

ಒಳಚರಂಡಿ ಹಾಗೂ ದೀಪದ ಸೌಕರ್ಯವನ್ನು ಇನ್ನೂ ಮಾಡಿಲ್ಲ. ಇನ್ನು ಎಷ್ಟು ದಿವಸಗಳಲ್ಲಿ ಈ ಸೌಕರ್ಯಗಳನ್ನು ಒದಗಿಸುತ್ತೀರಿ ? ಹಾಗೂ ಅವರು ಏನು ಸಾಲ ಮಾಡಿ ಹಣ ಕೊಟ್ಟಿದ್ದಾರೆ ಅದರ ಬಡ್ಡಿಯನ್ನು ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಹುಡ್ಕೋ ಸ್ಕೀಂ ಪ್ರಕಾರ ನಡೆಯುತ್ತಿದ್ದು ವಿಳಂಬವಾಗಿರುವುದರ ಬಗ್ಗೆ ಸಾಲ ಮಾಡಿದ್ದು ಅದರ ಬಡ್ಡಿ ಕಟ್ಟುವ ವಿಚಾರ ಇದರಲ್ಲಿ ಬರುವುದಿಲ್ಲ. ಮುಖ್ಯವಾಗಿ ಎಲ್ಲ ಕೆಲಸ ಮುಗಿದಿದ್ದು ನೀರಿನ ಕೆಲಸ ಮುಗಿಯಬೇಕಾಗಿತ್ತು ಬಂದಿದೆ. ದೀಪದ ವ್ಯವಸ್ಥೆ ಮಾಡುವುದರ ಕೊನೆಯ ಘಟ್ಟದಲ್ಲಿ ಇದೆ. ಬೇಗ ಕೆಲಸ ಮುಗಿಸಿ ಮನೆಗಳನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಬೇಗನೆ ಎಂದರೆ ಏನು ೧೫ ತಿಂಗಳು ಬೇಕೇ ? ಅಥವಾ ೧೫ ದಿವಸದಲ್ಲೇ ಮಾಡುತ್ತೀರಾ ? ೩೬ ತಿಂಗಳು ಬೇಕೇ ? ಒಟ್ಟಿನಲ್ಲಿ ನಿರ್ದಿಷ್ಟವಾಗಿ ಇಷ್ಟು ಕಾಲ ಬೇಕೆಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಬಹು ಬೇಗ.

ಅಧ್ಯಕ್ಷರು.—ಎಂ.ಎಸ್. ಪಾಟೀಲರ ಪ್ರಶ್ನೆ ಸಂಖ್ಯೆ ೪೮ (೧೦೮) ಮುಂದೆ ಹೋಗಿದೆ.

ಶ್ರೀ ಎಂ.ಎಸ್. ಪಾಟೀಲ್.—ಅಧ್ಯಕ್ಷರೇ, ಇದು ಎರಡನೇ ಸಲ ಮುಂದಕ್ಕೆ ಹೋಗಿದೆ. ನೇರವಾಗಿ ನಾನು ಒಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಅಧ್ಯಕ್ಷರೆ ಅವರಿಗೆ ಒಂದು ಮಾತನ್ನು ಕೇಳುತ್ತೇನೆ. ಅವರು ಈ ರೀತಿ ಪ್ರಶ್ನೆ ಕೇಳಿದ್ದಾರೆ :

> ''(ಅ) ೧೯೮೦ರ ನಂತರ ರಾಜ್ಯದಲ್ಲಿ ಪಟ್ಟಣ, ಪುರಸಭೆ ಹಾಗೂ ಮಹಾ ಪಾಲಿಕೆಗಳಿಂದ ಕಟ್ಟಿಸಿರುವ ಮಳಿಗೆಗಳ ಒಟ್ಟಾರೆ ಖರ್ಚು ಎಷ್ಟು?''

ನಮ್ಮಲ್ಲಿ ೧೭೦ ಸಿಟಿ ಮುನಿಸಿಪಾಲಿಟಿ, ಟೌನ್ ಮುನಿಸಿಪಾಲಿಟಿ ಹಾಗೂ ಕಾರ್ಪೋರೇಷನ್‌ಗಳು ಇವೆ. ಇಷ್ಟಗಳಲ್ಲಿ ೬ಕ್ಕೆ ಉತ್ತರ ಈಗ ಬಂದಿದೆ ೬ಕ್ಕೆ ಬಂದಿರುವುದರ ಬಗ್ಗೆ ಅವರು ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ. ಅವರ ಮುಂದಿನ ಪ್ರಶ್ನೆಗಳು ಈ ರೀತಿ ಇವೆ :

> ''ಆ ಮಹಾಪಾಲಿಕೆಯಿಂದ ಕಟ್ಟಿಸಿರುವ ಮಳಿಗೆಗಳನ್ನು ಕೊಡುವಾಗ ಬಾಡಿಗೆದಾರರಿಂದ ಠೇವಣಿ ಹಣ ಹಾಗೂ ವಿಧಿಸಿರುವ ಇತರೆ ನಿಬಂಧನೆಗಳು ಯಾವುವು ?
>
> ಇ ೧೯೮೬ನೇ ಜೂನ್ ತಿಂಗಳವರೆಗೆ ಕಟ್ಟಿ ಪೂರ್ತಿಯಾಗಿರುವ ರಾಜ್ಯಾದ್ಯಂತ ನಗರ ಪಾಲಿಕೆ ಹಾಗೂ ಮಹಾನಗರ ಪಾಲಿಕೆಗಳ ಮಳಿಗೆಗಳ ಸಂಖ್ಯೆ ಎಷ್ಟು ?
>
> ಈ ಬಾಡಿಗೆಗಳಿಗೆ ಕೊಡಬೇಕಾಗಿರುವ ಮಳಿಗೆಗಳನ್ನು ಕಟ್ಟಿಡ ಪೂರ್ತಿ ಮಾಡಿದ್ದರೂ ಇಲ್ಲಿಯವರೆಗೆ ಕಾನೂನಿನ ಪ್ರಕಾರ ಬಾಡಿಗೆ ಕೊಡದೇ ಇರುವುದಕ್ಕೆ ಕಾರಣವೇನು ?
>
> ಉ ರಾಜ್ಯದಲ್ಲಿ ಆಯ್ಕೆಗೊಂಡಿರುವ ಸದಸ್ಯರ ಆಪ್ತರಿಗೆ ಹಾಗೂ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದ ಆಪ್ತರಿಗೆ ಕಾನೂನುಗಳನ್ನು ಉಲ್ಲಂಘಿಸಿ ಎಷ್ಟು ಮಳಿಗೆಗಳನ್ನು ಕೊಡಲಾಗಿದೆ ?
>
> ಊ ಮಳಿಗೆಗಳ ವಿತರಣೆಯಲ್ಲಿ ಹಿಂದುಳಿದ ಸಮಾಜದ ಜನರಿಗೆ ರಾಜ್ಯಾದ್ಯಂತ ಎಷ್ಟು ಮಳಿಗೆಗಳನ್ನು ಕೊಡಲಾಗಿದೆ? ''

ನಾನು ಈ ಬಗ್ಗೆ ೧೭೦ ಸ್ಥಳೀಯ ಸಂಸ್ಥೆಗಳಿಂದ ವಿವರ ತರಿಸಿಕೊಡಬೇಕಾಗುತ್ತದೆ. ಕೇವಲ ೧೦-೧೫ ದಿವಸಗಳ ಕಾಲ ನಾವು ಇಲ್ಲಿ ಕೂರುತ್ತಿದ್ದೇವೆ. ಇವತ್ತು ಈ ಪ್ರಶ್ನೆ ಬಂದಿದೆ. ಹೇಗೆ ಉತ್ತರ ಕೊಡಬೇಕು ವುದು ಎಂದು ತಾವು ದಯವಿಟ್ಟು ಸಲಹೆ ಕೊಡಿ, ಆ ರೀತಿ ನಾನು ಮಾಡುತ್ತೇನೆ.

ಶ್ರೀ ಎಂ ಎಸ್. ಪಾಟೀಲ್.—ಸರ್ಕಾರಿ ಯಂತ್ರ ಚುರುಕಾಗಿದೆ, ಒಳ್ಳೆಯ ಚಾಣಾಕ್ಷ ಮಂತ್ರಿಗಳು ಇವ್ವಾರೆಂದು ನಾನು ತಿಳಿದುಕೊಂಡಿದ್ದೇನೆ ಹಾಗೂ ಜನರು ತಿಳಿದುಕೊಂಡಿದ್ದಾರೆ. ಎಲ್ಲಾ ತರಿಸಿದ ಮೇಲೆ ಯಾರು ಯಾರು ತಪ್ಪು ಮಾಡಿದ್ದಾರೆಂದು ತಿಳಿದು ಬರುತ್ತದೆ ಅವರ ಮೇಲೆ ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ವಿರುದ್ಧ ನಡೆದಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳ ಪಟ್ಟಿ

ಎನ್, ಆರ್. ಇ. ಪಿ. ಮಂತ್ರ್ಯ ಇತರೇ ಕಾರ್ಯಕ್ರಮಗಳಿಗೆ ಒದಗಿಸಿರುವ ಹಣ

೧೬೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).- ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫—೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ಎನ್ ಆರ್ ಇ ಪಿ (ಬರಗಾಲ), ಎನ್ಆರ್ಇಪಿ (ರೆಗ್ಯೂಲರ್) ಆರ್. ಎಲ್. ಇ. ಜಿ. ಪಿ. ಡಿ. ಪಿ ಎ. ಪಿ. ಇತರ ಕಾರ್ಯಕ್ರಮಗಳಿಗೆ ಸರ್ಕಾರ ದವರು ಬಿಡುಗಡೆ ಮಾಡಿದ ಹಣವೆಷ್ಟು? ಹಾಗೂ ಖರ್ಚಾದ ಹಣವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ತಾಲ್ಲೂಕುವಾರು ವಿವರಗಳನ್ನು ತಃಖ್ತೆ ೧ ರಿಂದ ೧೯ ರವರೆಗೆ ಲಗತ್ತಿಸಲಾಗಿದೆ.